ಸಿ.ಸಿ. **639/2019**

ಪಿ.ಡಬ್ಲ್ಯೂ-1

ದಿನಾಕಃ 04.09.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಆರೋಪಿ ಪರ ಶ್ರೀ ಪಿ.ವಿ ವಕೀಲರಿಂದಃ**

ದಿನಚರಿಯ ರಿಜಿಸ್ಟರನಲ್ಲಿ ಗಸ್ತು ಹೋಗುವಾಗ ಮತ್ತು ಹಿಂದುರುಗಿರುವ ಸಮಯ ಮತ್ತು ಮಾರ್ಗದ ಬಗ್ಗೆ ನಮೂದು ಮಾಡಿರುತ್ತೇವೆಂದರೆ ಸರಿ. ಸದರಿ ಬೆಗ್ಗೆ ಅಂತಿಮ ವರದಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳಕ್ಕೆ ಠಾಣೆಯಿಂದ ಯಾವಾ ಮಾರ್ಗವಾಗಿ ಹೋಗಿರುತ್ತೀರಿ ಎಂದರೆ ಸಾಕ್ಷಿ ಠಾಣೆಯಿಂದ ಬೈಪಾಸ್ ಮಾರ್ಗವಾಗಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಹೋಗಿರುವ ಮಾರ್ಗದಲ್ಲಿ ಬಸ್ ನಿಲ್ದಾಣ, ಮತ್ತು ಕಾಲೇಜುಗಳು ಇದ್ದು, ಕೆಪಿಟಿಸಿಎಲ್ ಕಛೇರಿಗಳು ಇದ್ದು ರಾತ್ರಿ ಸಮಯದಲ್ಲಿ ವಾಚ ಮೆನ್ ಗಳು ಇರುತ್ತಾರೆಂದರೆ ಸರಿ. ವಿಎಸ್.ಎಸ್.ಎನ್ ಬ್ಯಾಂಕನಲ್ಲೂ ಸಹ ವಾಚಮೆನ್ ಇದ್ದರು ಎಂದರೆ ಸರಿಯಲ್ಲ. ಘಟನಾ ಸ್ಥಳದ ಎದುರುಗಡೆ ವಾಸದ ಮನೆ ಮತ್ತು ಮಳಿಗೆಗಳು ಇದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ 10 ನಿಮಿಷಕ್ಕೆ ಒಮ್ಮೆ ಸಾರ್ವಜನಿಕರು ವಾಹನಗಳನ್ನು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಮುಖ್ಯ ರಸ್ತೆಯಾದ ಬಜಾರ್ ರಸ್ತೆಯಲ್ಲಿ ಸಿ.ಸಿ. ಕ್ಯಾಮಾರಗಳನ್ನು ಅಳವಡಿಸಿರುತ್ತಾರೆಂದರೆ ಸರಿ. ದಾಳಿ ಆದ ನಂತರ ಠಾಣಾಗೆ ಹಿಂದುರುಗುವಾಗ ಸದರಿ ಬಜಾರ್ ರಸ್ತೆಯಲ್ಲಿ ಹಿಂದುರುಗಿರುತ್ರಾರೆಂದರೆ ಸಾಕ್ಷಿ ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣನಿಂದ ಬಂದಿರುತ್ತೀರಿ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲೂ ಸಹ ಕ್ಯಾಮರಗಳನ್ನು ಅಳವಡಿಸಿರುತ್ತಾರೆಂದರೆ ಸರಿ. ಘಟನಾ ಸ್ಥಳದಲ್ಲಿರುವ ವಾಸದ ಜನರನ್ನು ಎಬ್ಬಿಸಿ ಆರೋಪಿಯನ್ನು ಗಸ್ತು ಮಾಡಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಹತ್ತಿರ ಕಾಲೇಜು ಮತ್ತು ಕೆಪಿಟಿಎಸಎಲ್ ಕಛೇರಿ ಇದ್ದು ಸದರಿ ವಾಚ್ ಮೆನ್ ಗಳ ಸಮಕ್ಷಮ ಗಸ್ತು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರಿಗೆ ನಾವು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಹತ್ತಿರ ಇದ್ದಂತಹ ಸಿ.ಸಿ. ಟಿವಿ ಗಸ್ತು ಮಾಡಿರುವ ಫೂಟೇಜ್ ಗಳನ್ನು ಈ ಪ್ರಕರಣದಲ್ಲಿ ಅಳವಡಿಸಿರುವುದಿಲ್ಲ ಎಂದರೆ ಸರಿ. ದಸ್ತಗಿರಿ ಮಾಡಿ ಆರೋಪಿಯನ್ನು ಕರೆದುಕೊಂಡು ಬರುವ

ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ.

ಆರೋಪಿಯದ್ದು ಮೂಲ ಕಸಬಾ ಹೋಬಳಿ, ರಾಯನಹಳ್ಳಿ ಎಂದರೆ ಸರಿ. ಸದರಿ ಗ್ರಾಮದಲ್ಲಿ ಆರೋಪಿ ಒಂದು ಹುಡುಗಿಯನ್ನು ಪ್ರೀತಿಸಿದ್ದು, ಸದರಿ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ಇರುತ್ತದೆಂದರೆ ನನಗೆ ಗೊತ್ತಿಲ್ಲ, ಸದರಿ ವಿಚಾರವಾಗಿ ಆರೋಪಿ ಅನುಮಾನಸ್ಥದವಾಗಿ ಆಯುಧವನ್ನು ಹಿಡಿದುಕೊಂಡು ಓಡಾಡುತ್ತಿರಲಿಲ್ಲ ಆದರೂ ಸಹ ನಮ್ಮ ಠಾಣೆಯ ಅಂಕಿ ಅಂಶಗಳಿಗೋಸ್ಕರ ಅವನ ವಿರುದ್ಧ ಗಸ್ತು ಮಾಡಿರುತ್ತೇವೆಂದು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಅಮಾನತ್ತು ಪಂಚನಾಮೆ ಮಾಡುವ ಮು.ಮಾ-1 ವಶಪಡಿಸಿಕೊಂಡಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದಿದ್ದರು, ಈ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇದೆ.**

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು